ಕರ್ಟನ್ ಹೊಲೆಯುತ್ತಿದ್ದರು. ಅವರಿಗೆ ಅಪಾರವಾದ ಸಂಗೀತ ಜ್ಞಾನವೂ ಇತ್ತು. ಓದಿನ ವಿಷಯದಲ್ಲಂತೂ ಸದಾ ಹಸಿವು. ರಾತ್ರಿ ನಾವೆಲ್ಲ ಮಲಗಿದ ಮೇಲೂ ಗಂಟೆಗಟ್ಟಲೆ ಓದುತ್ತಿದ್ದುದನ್ನು ಕಂಡಿದ್ದೇನೆ.

ನಮ್ಮ ಮನೆಗೆ ನಾಟಕದ ಕಲಾವಿದರು, ಸಾಹಿತಿಗಳು, ಸ್ನೇಹಿತರು, ವಾಸ್ತುಶಿಲ್ಪಿಗಳು ಎಲ್ಲ ಬರುತ್ತಿದ್ದರು. ಅದು ಸಹಜವಾದ ಸಮಾಜೀಕರಣ. ಬಾಲ್ಯದಿಂದಲೂ ನಾನು ಅದೇ ವಾತಾವರಣವನ್ನು ಕಂಡಿದ್ದು. ಅಲ್ಲಿ ಯಾವುದೇ ಸೆಮಿನಾರು ಅಥವಾ ಚರ್ಚಾಗೋಷ್ಠಿ ನಡೆಯುತ್ತಿರಲಿಲ್ಲ. ಅನೌಪಚಾರಿಕವಾಗಿ ಸಹಜ ಮಾತುಕತೆಯಲ್ಲೇ ಎಷ್ಟೋ ವಿಷಯಗಳು ದಕ್ಕುತ್ತಿದ್ದವು. ಬಂದವರಿಗೆಲ್ಲ ಅಪ್ಪ–ಅಮ್ಮನ ಆತಿಥ್ಯ. ಬೇರೆ ಪ್ರಕಾರಗಳ ಸ್ಪೆಷಲೈಜೇಷನ್ ನಮಗೆಲ್ಲ ಸಿಕ್ಕಿದ್ದೇ ಹಾಗೆ.

ಅಪ್ಪನದ್ದು ಅಸಾಂಪ್ರದಾಯಿಕ ವ್ಯಕ್ತಿತ್ವ. ಯಾವುದನ್ನೂ ಯಾರಮೇಲೂ ಹೇರುತ್ತಿರಲಿಲ್ಲ. ಪೂಜೆ ಮಾಡಲು ಇಷ್ಟಪಟ್ಟವರನ್ನು ಪ್ರಶ್ನಿಸುತ್ತಿರಲಿಲ್ಲ. ಅವರು ಮಾತ್ರ ಪಾಂಗಿತವಾಗಿ ಪೂಜೆ ಮಾಡುತ್ತಿರಲಿಲ್ಲ. ತುಂಬಾ ಸಂಕಟದ ಸನ್ನಿವೇಶವದಲ್ಲಿ ಮಾತ್ರ ಕೈಮುಗಿದು ಯಾವುದೋ ಶಕ್ತಿಯನ್ನು ಅವರು ಬೇಡಿದ್ದನ್ನು ನಾನು ಕಂಡಿರುವೆ. ಅದಕ್ಕೊಂದು ಉದಾಹರಣೆ, ನನ್ನ ತಂಗಿಗೆ ಆರೋಗ್ಯದ ಸಮಸ್ಯೆ ಇದ್ದಾಗಿನ ಸಂದರ್ಭ. ಅವಳು ಗರ್ಭಿಣಿಯಾಗಿದ್ದಾಗ ಕೀಲುಗಳ ಸಮಸ್ಯೆ ವಿಪರೀತ ಬಾಧಿಸಿತು. ಹೆರಿಗೆ ಆದಮೇಲೆ ಅದು ಉಲ್ಬಣಗೊಂಡಿತು. ಅವಳು ಬದುಕುವುದೇ ಕಷ್ಟ ಎನ್ನುವಂತಹ ಪರಿಸ್ಥಿತಿ. ಆ ಕ್ಷಣದಲ್ಲಿ ಅಪ್ಪ ಕೈಮುಗಿದದ್ದನ್ನು ನಾನು ಕಂಡಿರುವೆ.

ನಾನು ಮಗುವಾಗಿದ್ದಾಗಿನಿಂದಲೂ ಅಪ್ಪನ ಅಭಿನಯದ ರಿಹರ್ಸಲ್‌ಗಳನ್ನು ನೋಡಲು ಆಗೀಗ ಕರೆದುಕೊಂಡು ಹೋಗುತ್ತಿದ್ದರು. ತುಮಕೂರಿನಲ್ಲಿ 'ಸಮುದಾಯ' ರಂಗತಂಡದ ನೇತೃತ್ವವನ್ನು ಅವರು ವಹಿಸಿದ್ದರು. ಅವರಾಡುತ್ತಿದ್ದ ನಾಟಕಗಳು ಪ್ರೋಗ್ರೆಸಿವ್ ಆಗಿರುತ್ತಿದ್ದವು. 'ಪಂಚಮ' ಎನ್ನುವ ನಾಟಕದಲ್ಲಿ ಅವರು ಐಎಎಸ್ ಅಧಿಕಾರಿಯ ಪಾತ್ರ ನಿರ್ವಹಿಸಿದ್ದರು. 'ಮೆರವಣಿಗೆ' ಎಂಬ ಇನ್ನೊಂದು ನಾಟಕವೂ ಸದ್ದು ಮಾಡಿತ್ತು. ಸಿದ್ದಲಿಂಗಯ್ಯನವರ 'ಕತ್ತೆ ಮತ್ತು ಧರ್ಮ'ವನ್ನು ರಂಗಕ್ಕೆ ಅಳವಡಿಸಿದ್ದರು. ಆಗ ತುಮಕೂರಿನಲ್ಲಿ ರಂಗಮಂದಿರ ಇರಲಿಲ್ಲ. ಟೆಂಟ್ ಹಾಕಿ ನಾಟಕಗಳನ್ನು ಮಾಡುತ್ತಿದ್ದರು ಅಥವಾ ಕಲ್ಯಾಣಮಂಟಪದಲ್ಲಿ ಕುರ್ಚಿಗಳನ್ನೇ ಪರಿಕರಗಳಾಗಿ ಬಳಸಿ ನಾಟಕಗಳನ್ನು ಆಡುತ್ತಿದ್ದರು. ನಿರಂಜನಾರಾಧ್ಯ ಎಂಬ, ವಿಜ್ಞಾನ ಪಾಠವನ್ನೂ ಹೇಳುತ್ತಿದ್ದ ವಿಜ್ಞಾನಿ ಒಬ್ಬರು ಒಂದು ಪಾತ್ರದಲ್ಲಿ ನಟಿಸಿದ್ದರು. ಅವರು ಅಪ್ಪನಿಗೆ ತಂಬೂರಿಯಿಂದ ಹೊಡೆಯುವ ದೃಶ್ಯವೊಂದು ನಾಟಕದಲ್ಲಿ ಇತ್ತು. ಅವರು ಪಾತ್ರದಲ್ಲಿ ತಲ್ಲೀನರಾಗಿ ಹೊಡೆದಿದ್ದನ್ನು ನೋಡಿ ನಾನು ಕಿರುಚಿದ್ದೆ. ಜೋರಾಗಿ ಅತ್ತಿದ್ದೆ. ಅಪ್ಪನಿಗೆ ಹೊಡೆದುಬಿಟ್ಟರಲ್ಲ ಎಂಬ ನೋವು ನನ್ನದು. ಬ್ಯಾಕ್‌ಸ್ಟೇಜ್‌ಗೆ ಕರೆದುಕೊಂಡು ಹೋಗಿ, ಅವರೇ ಸಮಾಧಾನ ಮಾಡಿದ್ದರೂ ನಾನು ಸುಮ್ಮನಾಗಿರಲಿಲ್ಲ. ಮಾರನೆಯ ದಿನ ಅವರು ಮನೆಗೆ ಬಂದಾಗ, ಕೆಟ್ಟ ಶಬ್ದಗಳನ್ನೆಲ್ಲ ಬಳಸಿ ಅವರನ್ನು ಸ್ವಾಗತಿಸಿದ್ದನ್ನು ಕಂಡು, 'ನೋಡಪ್ಪ, ನಿನ್ನ ಮಗ ಹೇಗೆ ವೆಲ್‌ಕಮ್ ಮಾಡುತ್ತಾನೆ' ಎಂದು ಅಪ್ಪನಲ್ಲಿ ಅವರು ಹೇಳಿದ್ದರು.

ಅಪ್ಪ ನಾಟಕಗಳ ರೂಪಾಂತರ, ಭಾಷಾಂತರ ಮಾಡಿದ್ದರು. ರಂಜಿತ್ ಕಪೂರ್ ಅವರ ನಾಟಕವನ್ನೇ 'ಮುಖ್ಯಮಂತ್ರಿ' ಎಂದು ಅವರು ರೂಪಾಂತರಿಸಿದ್ದು. ಅದರ ಪ್ರದರ್ಶನದ ಮೂಲಕ 'ಮುಖ್ಯಮಂತ್ರಿ ಚಂದ್ರು' ಎಷ್ಟು ಜನಪ್ರಿಯರಾದರು ಎನ್ನುವುದನ್ನು ನಾವೆಲ್ಲ ಕಂಡಿದ್ದೇವೆ. ಅಪ್ಪ ಸ್ವಲ್ಪ ದಿನ ಸರ್ಕಾರಿ ಕೆಲಸ ಬಿಟ್ಟುಬಿಟ್ಟಿದ್ದರು. ಆಗ ಬೆಂಗಳೂರಿನ ಕಲಾಕ್ಷೇತ್ರದಲ್ಲಿ ಅವರು ಆಡುತ್ತಿದ್ದ ನಾಟಕಗಳನ್ನು ನಾನೂ ನೋಡಿರುವೆ. 'ಸಂತೆಯಲ್ಲಿ ನಿಂತ ಕಬೀರ', 'ಹುಲಿಯ ನೆರಳು', 'ಕತ್ತಲೆ ದಾರಿ ದೂರ', 'ಹುತ್ತವ ಬಡಿದವರು' — ಹೀಗೆ ನನಗೆ ಕಲಾಕ್ಷೇತ್ರ ನಾಟಕಗಳನ್ನು ಪರಿಚಯ ಮಾಡಿಕೊಟ್ಟಿತು. ಅಲ್ಲಿ ನಾನು ಕಂಡ ಎಲ್ಲವೂ ಮುಂದೆ ಕಲಾವಿದನಾದಾಗ ನನಗೆ ಉಪಯುಕ್ತವಾಗಿವೆ.

ರಾಜ್‌ಕುಮಾರ್, ಬಾಲಣ್ಣ (ಬಾಲಕೃಷ್ಣ), ಲೋಕೇಶ್, ಶಂಕರ್‌ನಾಗ್ ಇವರೆಲ್ಲರ ಪರಿಚಯವಾದದ್ದೂ ಅಪ್ಪನ ಕಾರಣದಿಂದಲೇ. ಶಂಕರ್‌ನಾಗ್ ಅವರನ್ನು ಪುಟ್ಟವನಾಗಿದ್ದಾಗ ನೋಡಿದ್ದೆ. ಅವರನ್ನು ಕಂಡಾಗ ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಆಮೇಲೆ 'ಸಾಂಗ್ಲಿಯಾನ' ಸಿನಿಮಾ ಡಬ್ಬಿಂಗ್ ಮಾಡುವ ಸಂದರ್ಭದಲ್ಲಿ ನನ್ನನ್ನು ನೋಡಿ, 'ಬಾ, ಶರತ್' ಎಂದು ಅವರು ಗುರುತಿಸಿದ್ದನ್ನು ಮರೆಯಲಾರೆ.

ಅಪ್ಪ ರಾಜಾಜಿನಗರದಲ್ಲಿ ದೊಡ್ಡ ಮನೆ ಕಟ್ಟಿ 'ಭದ್ರಾ ಹವೇಲಿ' ಎಂದು ಹೆಸರಿಟ್ಟರು. ಅವರ ತಾಯಿಯ ಹೆಸರು ಭದ್ರಾ. ಮನೆ ಕಲ್ಲುಕಟ್ಟಡವಾಗಿದ್ದರಿಂದ ಭದ್ರವಾಗಿಯೇ ಇದೆ. ಎಲ್ಲರೂ ಒಟ್ಟಾಗಿರಬೇಕು ಎಂಬ ದೃಷ್ಟಿಯಿಂದಲೇ ಅದನ್ನು ಅಪ್ಪ ವಿನ್ಯಾಸ ಮಾಡಿಸಿದ್ದರು. ಅಂತರರಾಷ್ಟ್ರೀಯ ಮಟ್ಟದ ವಾಸ್ತುಶಿಲ್ಪಿಗಳು ಬಂದು ಮನೆಯ ಗಾಳಿ–ಬೆಳಕಿನ ವ್ಯವಸ್ಥೆ, ಸ್ಪೇಸಿಂಗ್ ಇತ್ಯಾದಿಯನ್ನೆಲ್ಲ ಗಮನಿಸಿ, ಚರ್ಚೆ ನಡೆಸುತ್ತಿದ್ದರು. 'ಕಲಾಮೇಳ' ನಡೆದಾಗ ಮನೆಯೊಳಗಿನ ಪರಿಸರದಲ್ಲೇ ಕಲಾವಿದರು ತಮಗಿಷ್ಟವಾದ ಜಾಗ ಆರಿಸಿಕೊಂಡು ತಾಲೀಮು ನಡೆಸಿದ್ದನ್ನೂ ಕಂಡಿರುವೆ.

ನಮ್ಮ ಮನೆಗೆ ಬಿ.ವಿ. ಕಾರಂತರು, ಯು.ಆರ್. ಅನಂತಮೂರ್ತಿ, ರಾನಡೆ, ಜರಗನಹಳ್ಳಿ ಶಿವಶಂಕರ್ ಮೊದಲಾದವರು ಬರುತ್ತಿದ್ದರು. ನಾನೂ ಶಿಕ್ಷಣ ಮುಗಿಯುವ ಮೊದಲೇ ನಾಟಕಗಳಲ್ಲಿ ಅಭಿನಯಿಸತೊಡಗಿದ್ದೆ. ಶಿಕ್ಷಣ ಮುಗಿದ ಮೇಲೆ ಎಂ.ಎಸ್. ಸತ್ಯು ಅವರಿಗೆ ಅಪ್ಪ ಪರಿಚಯಿಸಿದರು. ಪ್ರಸನ್ನ, ಅರುಂಧತಿ ನಾಗ್, ಲೋಕೇಶ್, ರಾಜಾರಾಂ, ಬಿ. ಜಯಶ್ರೀ ಇವರೆಲ್ಲರ ನಾಟಕಗಳಲ್ಲಿ ನಾನು ಅದಾಗಲೇ ಅಭಿನಯಿಸಿದ್ದೆ. ಅಪ್ಪ–ಅಮ್ಮ ನನ್ನ ನಾಟಕಗಳನ್ನು ನೋಡಲಿ ಎನ್ನುವ ಆಸೆ ಇತ್ತು. ಅಮ್ಮನಿಗೆ ನಾನು ಮಾಡಿದ್ದೆಲ್ಲವೂ ಚೆನ್ನ. ಅಪ್ಪ ಮಾತ್ರ ಆಗೀಗ ನಾಟಕ ನೋಡಿದರೂ ಏನೂ ಹೇಳುತ್ತಿರಲಿಲ್ಲ. 'ಅಪ್ಪಾಜಿ ಏನಂದರು' ಅಂತ ಅಮ್ಮನನ್ನು ಕೇಳಿದಾಗ, ಅವರು ಪ್ರೀತಿಯಿಂದ, 'ಮಗನಿಗೆ ಏನು ಅಂತ ಹೇಳಬಾರದೆ' ಎಂದು ಗದರಿದರು. ಆಗ ಅಪ್ಪ ಹೇಳಿದ ಮಾತಿನ್ನೂ ನೆನಪಿದೆ: 'ನೀನು ನಾಟಕಗಳಲ್ಲಿ ಭಿನ್ನವಾಗಿ ನಿಲ್ಲಲು ಹೊರಟಿರುವೆ. ನಾಟಕ ಎಲ್ಲರನ್ನೂ ಒಳಗೊಳ್ಳುವ ಕಲೆ. ಅಲ್ಲಿ ನೀನೂ ಎಲ್ಲರೊಳಗೆ ಒಂದಾಗಬೇಕೇ ವಿನಾ ಭಿನ್ನವಾಗಲು ಹೋಗಕೂಡದು.' ಅವರ ಈ ಮಾತಿನ ವಿಶಾಲಾರ್ಥ ನನಗೆ ಆಮೇಲೆ ಗೊತ್ತಾಯಿತು.

ರಂಗಭೂಮಿಯಿಂದ ನನ್ನ ತಂದೆ ಕೆಲವು ವರ್ಷ ದೂರ ಉಳಿದಿದ್ದರು. ಸಿನಿಮಾದಲ್ಲೇ ತೊಡಗಿದ್ದರು. ಆಗ ಎ.ಎಸ್. ಮೂರ್ತಿ ಒಮ್ಮೆ ಸುದ್ದಿಗೋಷ್ಠಿಯಲ್ಲಿ, ರಂಗಭೂಮಿ ಮರೆತರೆ, ಅದಕ್ಕೆ ಏನು ಕಾಣಿಕೆ ಕೊಟ್ಟಂತಾಯಿತು ಎಂದು ಪ್ರಶ್ನಿಸಿದ್ದರಂತೆ. ಆಗ ಅಪ್ಪಾಜಿ, 'ನಾನು ರಂಗಭೂಮಿಗೆ ಶರತ್ ಲೋಹಿತಾಶ್ವನನ್ನು ಕೊಟ್ಟಿದ್ದೇನೆ' ಎಂದಿದ್ದರಂತೆ.

ಎಚ್.ಎಸ್. ಶಿವಪ್ರಕಾಶ್ ಅವರ ಜತೆ ಅಪ್ಪನದ್ದು ಶೀತಲ ಸಮರ ಇದ್ದೇ ಇರುತ್ತಿತ್ತು. ಆಗ ಅವರು ಅಪ್ಪನನ್ನು ಸರಿಯಾಗಿ ಮಾತನಾಡಿಸುತ್ತಿರಲಿಲ್ಲ. ಆದರೆ ಸಿಕ್ಕಾಗಲೆಲ್ಲ, 'ನಿನ್ನ ಮಗ ಏನ್ ಆ್ಯಕ್ಟಿಂಗ್ ಮಾಡ್ತಾನೆ... ಎಂಥ ಧ್ವನಿ' ಎಂದೆಲ್ಲ ಅದೇ ಪದಗಳನ್ನು ಉಚ್ಚರಿಸುತ್ತಿದ್ದರು. ಆಗ ಅಪ್ಪ, 'ನೀನು ಏನು ಮಾತನಾಡಬೇಕೋ ಅದನ್ನೇ ಮಾತನಾಡು' ಎಂದು ಕೋಪದ ಗೆರೆಗಳನ್ನು ಸರಿಸುತ್ತಿದ್ದರು.



ಅನೇಕರು ನನ್ನ ಕಂಠ, ನಿಲುವು, ವಸ್ತ್ರದ ರೀತಿಯನ್ನು ಅಪ್ಪನಂತೆಯೇ ಇದೆ ಎನ್ನುತ್ತಿದ್ದರು. ಆಗ ಅಪ್ಪ, 'ಡೋಂಟ್ ಕ್ವೆಶ್ಚನ್ ದಿ ಇಂಟೆಗ್ರಿಟಿ ಆಫ್ ಮೈ ವೈಫ್' ಎಂದು ತಮಾಷೆಯ ಧಾಟಿಯಲ್ಲಿ ಹೇಳುತ್ತಿದ್ದರು. ನಾನು ಅವರ ಮಗ ಎಂಬ ಹೆಮ್ಮೆಗೆ ಇವೆಲ್ಲ ಕೆಲವು ಉದಾಹರಣೆಗಳು.

ಕೊನೆಗಾಲದಲ್ಲಿ ಅವರು ದಿಢೀರನೆ ಹಾಸಿಗೆ ಹಿಡಿದಾಗ ನಮಗೆಲ್ಲ ಸಂಕಟವಾಯಿತು. ಚೇತರಿಸಿಕೊಳ್ಳಬಹುದೆಂಬ ನಮ್ಮೆಲ್ಲರ ಆಸೆ ಕೊನೆಗೂ ಈಡೇರಲಿಲ್ಲ. ಅಪ್ಪನ ನೆನಪುಗಳು ಮಾತ್ರ ಎಲ್ಲೆಡೆಯೂ ಹರಡಿಕೊಂಡಿವೆ.

ಪ್ರತಿಕ್ರಿಯಿಸಿ: feedback@sudha.co.in